**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಇವರು ಪ್ರಸ್ತಾಪಿಸಿರುವ ಶೂನ್ಯವೇಳೆಯಲ್ಲಿನ ವಿಷಯಕ್ಕೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ.**

**ಪ್ರಶ್ನೆ:**

ಶಕ್ತಿ ಗೆಲುವಿನಲ್ಲಿ ರಾಜ್ಯ ಸಾರಿಗೆ ವ್ಯವಸ್ಥೆಗೆ ನಿಶ್ಯಕ್ತಿ. ಒಂದೇ ಬಸ್‌ನಲ್ಲಿ 2 ಗಂಟೆಯ ಪ್ರಯಾಣಕ್ಕೆ ಸುಮಾರು 3 ಬಸ್ಸು ಬದಲಿಸಿ ಐದೂವರೆ ಗಂಟೆ ಪ್ರಯಾಣ. ಇದು ಗ್ರಾಮೀಣ ಭಾಗದಲ್ಲಿನ ಶಕ್ತಿ ಯೋಜನೆಯ ಎಫೆಕ್ಟ್

ದಿನಾಂಕ:14.12.2025ರ ಭಾನುವಾರ ಬೆಳಗ್ಗೆ 6.30ಕ್ಕೆ ಶಿರಸಿಯಿಂದ ಹುಬ್ಬಳ್ಳಿಗೆ ಹೊರಟಿದ್ದ ಸಾರಿಗೆ ಸಂಸ್ಥೆ ಬಸ್ ಇಸಳೂರು ಗ್ರಾಮಕ್ಕೆ ಬರುವುದರೊಳಗೆ ಹಾಳಾಗಿ ನಿಂತಿತು. ಅಲ್ಲಿಂದ ಪ್ರಯಾಣಿಕರನ್ನು ಬೇರೆ ಬಸ್ಸಿಗೆ ಹತ್ತಿಸಿದರೆ ಅದು ತಡಸ ದಾಟಿ ಹೆದ್ದಾರಿ ಏರಿ ಮಲಗಿಬಿಟ್ಟಿತು. ಪುನ: ಅಲ್ಲಿಂದ ಮೂರನೇ ಬಸ್ ಏರಿ ಪ್ರಯಾಣಿಕರು ಹುಬ್ಬಳ್ಳಿ ತಲುಪಿದರು. ಎರಡು ತಾಸಿನ ಈ ಪ್ರಯಾಣಕ್ಕೆ ತಗುಲಿದ್ದು ಸರಾಸರಿ ಐದೂವರೆ ಗಂಟೆ.

ಇದು ನಿತ್ಯವೂ ನೂರಾರು ಪ್ರಯಾಣಿಕರ ಸಮಸ್ಯೆಯಾಗಿದೆ. ರಸ್ತೆ ತುಂಬ ಗುಂಡಿಗಳ ರಾಶಿ. "ಶಕ್ತಿ ಯೋಜನೆ" ಯಶಸ್ಸಿನ ನಡುವೆ ಇಂಥ ಹತ್ತಾರು ಸಮಸ್ಯೆಗಳಿಂದ ಸಾರಿಗೆ ವ್ಯವಸ್ಥೆ ಅದ್ವಾನವಿದ್ದು ಹೋಗಿವೆ. ಬಸ್ ರಿಪೇರಿಗೂ ಹಣ ಇಲ್ಲದೆ ಆಯಸ್ಸು ಮುಗಿದ ಬಸ್‌ಗಳು ಎಲ್ಲೆಂದರಲ್ಲಿ ಕೆಟ್ಟು ನಿಲ್ಲುವುದು ಸಾಮಾನ್ಯವಾಗುತ್ತಿದೆ. ಬಿಡಿ ಭಾಗಗಳ ಅಳವಡಿಕೆಗೆ ದುಡ್ಡಿಗೂ ಸಮಸ್ಯೆ ಆಗಿದೆ ಎನ್ನುತ್ತಾರೆ ಅಧಿಕಾರಿಗಳು. ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಬಸ್‌ಗಳ ಸ್ಥಿತಿ ಚಿಂತಾಜನಕವಾಗಿದೆ.

ಸಾರಿಗೆ ಸಂಸ್ಥೆ ಬಸ್‌ಗಳು ಗರಿಷ್ಠ 9-10 ಲಕ್ಷ ಕಿ.ಮೀ. ಸಂಚರಿಸಿದರೆ ಗುಜರಿಗೆ ಹಾಕುತ್ತಿದ್ದರು. ಈಗ 15-20 ಲಕ್ಷ ಕಿ.ಮೀ. ವರೆಗೆ ಓಡಿಸುತ್ತಿದ್ದಾರೆ. ಹಾಗಾಗಿ, ಬಸ್‌ಗಳು ಎಲ್ಲೆಂದರಲ್ಲಿ ಕೆಟ್ಟು ನಿಲ್ಲುತ್ತವೆ ಎನ್ನುತ್ತಾರೆ ಅಧಿಕಾರಿಗಳು,

ಟಿಕೆಟ್ ಬಿಲ್‌ನಂತೆ ಸರಕಾರಕ್ಕೆ ವರದಿ ಕೊಟ್ಟರೆ, ಅದರಲ್ಲಿ ಶೇ.65-70ರಷ್ಟು ಮಾತ್ರ ಹಣ ಕೊಡುತ್ತಿದ್ದಾರೆ. ಶಕ್ತಿ ಯೋಜನೆ ಫಲಾನುಭವಿಗಳ ಮೊತ್ತ 8.500 ಕೋಟಿ ರೂ. ಆಗುತ್ತದೆ. ಆ ಹಣ ನಿಗಮಗಳಿಗೆ ಕೊಡಬೇಕು. ಈ ಮೊತ್ತವನ್ನು ಪಾವತಿ ಮಾಡದೇ ಇರುವುದರಿಂದ ನಷ್ಟ ಅನುಭವಿಸುತ್ತಿರುವ ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣದ ಹುನ್ನಾರ ಅಡಗಿದೆಯೇ? ಎಂಬುದಾಗಿ ಸಾರ್ವಜನಿಕರು ಚರ್ಚಿಸುತ್ತಿರುವುದನ್ನು ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಉತ್ತರ:-**

ಪ್ರಸ್ತುತ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ದಿನಾಂಕ:18.12.2025ರಂದಯ 4972 ಅನುಸೂಚಿಗಳನ್ನು 5215 ವಾಹನಗಳಿಂದ ಕಾರ್ಯಾಚರಣೆ ಮಾಡಲಾಗುತ್ತಿದೆ. ಅದರಂತೆ 280 ಹೆಚ್ಚುರಿ ವಾಹನಗಳು ಇರುತ್ತವೆ. ಸಂಸ್ಥೆಯು 06 ಜಿಲ್ಲೆಗಳ ವ್ಯಾಪ್ತಿಯಲ್ಲಿ 09 ವಿಭಾಗಗಳಿಂದ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಕೆಲವು ಕಡೆ ರಸ್ತೆಗಳು ಸರಿಯಿಲ್ಲದ ಕಾರಣ ಅವಗಡಗಳು ಸಂಭವಿಸಿರುತ್ತವೆ. ಆದರೇ ಸದರಿ ವಾಹನಗಳನ್ನು ತುರ್ತಾಗಿ ಸರಿಪಡಿಸುವುದರೊಂದಿಗೆ ಸಾರ್ವಜನಿಕ ಪ್ರಯಾಣಿಕರಿಗೆ ತೊಂದರೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ.ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಕೇಂದ್ರ ಸರ್ಕಾರದ ಆದೇಶದನ್ವಯ ಸರ್ಕಾರಿ ಬಸ್‌ಗಳನ್ನು ನಿರುಪಯುಕ್ತಗೊಳಿಸಲು 15 ವರ್ಷ ವಯೋಮಾನವನ್ನು ನಿಗದಿಪಡಿಸಿದ್ದು, ಸದರಿ ಅವಧಿ ಮೀರಿರುವ ಬಸ್‌ಗಳು ನಿಗಮಗಳಲ್ಲಿ ಯಾವುದು ಕಾರ್ಯಾಚರಣೆಯಲ್ಲಿರುವುದಿಲ್ಲ.

ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ **ಈ ಕೆಳಕಂಡ ಮಾದರಿಯ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ನಿಗಧಿಪಡಿಸಿರುವ ಬಸ್ ಕ್ರಮಿಸಿರುವ ಕಿ.ಮೀ ಮತ್ತು ಬಸ್‌ಗಳ ವಯೋಮಾನದ ವಿವರ ಕೆಳಕಂಡಂತಿದೆ:-**

| ಕ್ರ. ಸಂ | ವಾಹನ ತಯಾರಿಕೆ/ ಮಾದರಿ | ನಿಗಧಿಪಡಿಸಿರುವ ಕಿ.ಮೀ. /ವರ್ಷ |
|---|---|---|
| 1 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಕರ್ನಾಟಕ ಸಾರಿಗೆ, ರಾಜಹಂಸ / ವೈಭವ, ನಾನ್ ಎ.ಸಿ. ಸ್ಲೀಪರ್ ವಾಹನಗಳು (ಮಿಡಿ, ಗ್ರಾಮಾಂತರ ಸಾರಿಗೆ ಮತ್ತು ದ್ವಿದ್ವಾರ ನಗರ ಸಾರಿಗೆ ಹೊರತುಪಡಿಸಿ) | 11.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 2 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಮಿಡಿ, ಗ್ರಾಮಾಂತರ ಸಾರಿಗೆ ದ್ವಿದ್ವಾರ ನಗರ ಸಾರಿಗೆ ಹಾಗೂ ಎಲ್ಲಾ ಇಲಾಖಾ ವಾಹನಗಳು.(ಕಾರು/ಜೀಪು ಹೊರತುಪಡಿಸಿ) | 9.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 3 | ವೋಲ್ವೋ ನಗರ ಸಾರಿಗೆ ವಾಹನಗಳು | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 4 | ವೋಲ್ವೋ ಸೀಟರ್ ಮತ್ತು ಸ್ಲೀಪರ್ ವಾಹನಗಳು | 15.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 5 | ಮರ್ಸಿಡೀಸ್ ಬೆಂಜ್ ಸೀಟರ್ ವಾಹನಗಳು | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 6 | ಸ್ಕ್ಯಾನಿಯ ಸೀಟರ್ ವಾಹನಗಳು | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 7 | ಕರೋನಾ ಎ.ಸಿ. ಮತ್ತು ನಾನ್ ಎ.ಸಿ. ಸ್ಲೀಪರ್ ವಾಹನಗಳು | 11.00 ಲಕ್ಷ ಕಿ.ಮೀ. ಅಥವಾ 15 ವರ್ಷ |

ಇದಲ್ಲದೆ, ಹೆಚ್ಚಿನ ಕಿ.ಮೀ. ಕ್ರಮಿಸಿರುವ ವಾಹನಗಳ, ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ. ಮಿತಿಗಿಂತ ಹೆಚ್ಚಿನ ಕಿಮೀ ಕ್ರಮಿಸಿ, ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಬಸ್‌ಗಳಿಗೆ ಅವಶ್ಯವಿದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ಬಸ್‌ಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ಆದಾಗ್ಯೂ, ಪ್ರತಿ ವರ್ಷ ನಿಗಮಗಳಲ್ಲಿನ ಬಸ್‌ಗಳನ್ನು ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಸುಸ್ಥಿತಿಯಲ್ಲಿರುವ ಕುರಿತು ಖಾತ್ರಿಪಡಿಸಿಕೊಂಡು ಕಾರ್ಯಾಚರಣೆಗೊಳಿಸಲಾಗುತ್ತಿರುತ್ತದೆ.

ಈ ಮೊದಲು ಬಿ.ಎಸ್-2 ವಾಹನಗಳನ್ನು 9-10 ಲಕ್ಷ ಕಿ.ಮೀ ಕ್ರಮಿಸಿದ್ದಲ್ಲಿ ನಿರುಪಯುಕ್ತಗೊಳಿಸಲಾಗುತ್ತಿದ್ದು, ಪ್ರಸ್ತುತ ಸಂಸ್ಥೆಯಲ್ಲಿ ಬಿ.ಎಸ್-2 ರಿಂದ ಬಿ.ಎಸ-3 ,4 ಮತ್ತು ಬಿ.ಎಸ-6 ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಆದ್ದರಿಂದ ಕೇಂದ್ರ ಸರ್ಕಾರದ ಅಧಿಸೂಚನೆಯಂತೆ 2023 ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ 15 ವರ್ಷ ಪೂರೈಸಿದ ವಾಹನಗಳನ್ನು ನಿರುಪಯುಕ್ತಗೊಳಿಸಲಾಗುತ್ತಿದೆ. ಅದರಂತೆ 2023-24 ರಿಂದ ಇಲ್ಲಿಯವರೆಗೆ ಒಟ್ಟು 501 ಬಸ್ಸುಗಳನ್ನು ನಿಷ್ಕ್ರೀಯಗೊಳಿಸಲಾಗಿದೆ. ಪ್ರಸ್ತುತ 20256-26ನೇ ಸಾಲಿನಲ್ಲಿ 15 ವರ್ಷ ಪೂರೈಸಲಿರುವ ಒಟ್ಟು 278 ವಾಹನಗಳಲ್ಲಿ ಈಗಾಗಲೇ 97 ವಾಹನಗಳನ್ನು ನಿರುಪಯುಕ್ತಗೊಳಿಸಲಾಗಿದ್ದು, ಉಳಿದ 181 ವಾಹನಗಳನ್ನು 2025-26ನೇ ಸಾಲಿನ ಅಂತ್ಯದವರೆಗೆ ನಿಷ್ಕ್ರೀಯಗೊಳಿಸಲು ಕ್ರಮಕೈಗೊಳ್ಳಲಾಗುವುದು.

2023-24ನೇ ಸಾಲಿನ ಪೂರ್ವದ ನಾಲ್ಕು ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರಲಿಲ್ಲ. ಆದರೆ, ರಾಜ್ಯದ ನಾಲ್ಕು ಸಾರಿಗೆ ನಿಗಮ/ಸಂಸ್ಥೆಗಳಲ್ಲಿ **2023-24 ರಿಂದ 2025-26ರವರೆಗೆ ಖರೀದಿಸಿರುವ/ಖರೀದಿ ಹಂತದಲ್ಲಿರುವ** ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:-

| **ಸಂಸ್ಥೆಗಳು** | **2023-24 (Jan)** | **2024-25** | **2025-26** | **ಒಟ್ಟು** |
|---|---|---|---|---|
| ಕ.ರಾ.ರ.ಸಾ.ನಿಗಮ | 510 | 698 | 80* | 1288 |
| ಬೆಂ.ಮ.ಸಾ.ಸಂಸ್ಥೆ | 20 ಡೀಸೆಲ್ | 820 ಡೀಸೆಲ್ | - | 2275 |
| | 341 ಇ.ವಿ | 755 ಇ.ವಿ | 339 ಇ.ವಿ | |
| ವಾ.ಕ.ರ.ಸಾ.ಸಂಸ್ಥೆ | 296 | 560 | 311** | 1167 |
| ಕ.ಕ.ರ.ಸಾ.ನಿಗಮ | 720 | 307 | 94 | 1121 |
| **ಒಟ್ಟು** | **1887** | **3140** | **824** | **5851** |

* ಪ್ರಸಕ್ತ 2025-26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ **70 ನಾನ್ ಎ.ಸಿ.ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು**, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

**ಪ್ರಸಕ್ತ 2025-26ನೇ ಸಾಲಿನಲ್ಲಿ **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ** ಹಂಚಿಕೆಯಾಗಿರುವ 300 ಹೊಸ ಬಸ್‌ಗಳ ಟೆಂಡರ್ ಆಹ್ವಾನಿಸಲಾಗಿದ್ದು, ಖರೀದಿ ಆದೇಶ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ. ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ಉತ್ತರ ಕರ್ನಾಟಕದಲ್ಲಿ ಹಳೆಯ ಬಸ್ಸುಗಳ ರಿಪೇರಿ ಇತ್ಯಾದಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಸಂಸ್ಥೆಯಲ್ಲಿ 2023-24ರಿಂದ ಇಲ್ಲಿಯವರೆಗೆ ಒಟ್ಟು 867 ಹೊಸ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ. ಉಳಿದ ಬಸ್ಸುಗಳನ್ನು ಪ್ರತಿ ವರ್ಷ ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ರಹದಾರಿ ನವೀಕರಣ ಮಾಡಿ ಕಾರ್ಯಾಚರಣೆ ಮಾಡಲಾಗುತ್ತಿದೆ. ರಿಪೇರಿಗೆ ಬಂದ ವಾಹನಗಳನ್ನು ಪ್ರತಿ ದಿನ ನಿರ್ವಹಣೆ ಮಾಡಿ ಮಾರ್ಗದ ಮೇಲೆ ಕಳುಹಿಸಲಾಗುತ್ತಿದೆ. ಅನಿವಾರ್ಯವಾಗಿ ಅಪಘಾತ/ ಅವಘಡವಾದ ಸಂದರ್ಭದಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಅನಾನುಕೂಲವಾಗದಂತೆ ಪರ್ಯಾಯ ವ್ಯವಸ್ಥೆಯನ್ನು ಮಾಡಿ ವಾಹನಗಳನ್ನು ದುರಸ್ಥಿಗೊಳಿಸಲಾಗುತ್ತಿದೆ. ಅಲ್ಲದೇ ಸರ್ಕಾರದ ಅಧಿಸೂಚನೆಯಂತೆ 15 ವರ್ಷ ಪೂರ್ಣಗೊಂಡ ವಾಹನಗಳನ್ನು ನಿರುಪಯುಕ್ತಗೊಳಿಸಲಾಗುತ್ತಿದೆ. ಇದಲ್ಲದೇ 2025-26ನೇ ಸಾಲಿನಲ್ಲಿ 474 ಹೊಸ ಬಸ್ಸುಗಳನ್ನು ಖರೀದಿಸುವ ಯೋಜನೆ ಇದ್ದು, 2023-2024 ರಿಂದ ಇಲ್ಲಿಯವರೆಗೆ ಒಟ್ಟು 210 ಹಳೆಯ ಬಸ್ಸುಗಳನ್ನು ಪುನಶ್ಚೇತನಗೊಳಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯನ್ನು ದಿನಾಂಕ:11.06.2023ರಿಂದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಿದ್ದು, ಪ್ರಸ್ತುತ ಯಶಸ್ವಿಯಾಗಿ ಜಾರಿಯಲ್ಲಿರುತ್ತದೆ.

ಈ ಯೋಜನೆ ಜಾರಿಗೆ ಬಂದ ದಿನಾಂಕ:11.06.2023ರಿಂದ ನವೆಂಬರ್-25ರವರೆಗೆ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಈವರೆವಿಗೂ ಅಂದಾಜು 625 ಕೋಟಿ ಫಲಾನುಭವಿಗಳಿಗೆ ಉಚಿತ ಬಸ್ ಟಿಕೆಟ್ ನೀಡಲಾಗಿದ್ದು, ಈ ಯೋಜನೆಗಾಗಿ ನಿಗಮವಾರು ಬಿಡುಗಡೆಯಾದ ಮತ್ತು ಬಾಕಿ ಅನುದಾನದ ವಿವರ ಕೆಳಕಂಡಂತಿರುತ್ತದೆ:-

**(ರೂ.ಕೋಟಿಗಳಲ್ಲಿ)**

| ಸಂಸ್ಥೆ/ನಿಗಮ | ವರ್ಷ | ಬಿಡುಗಡೆ ಮೊತ್ತ | ಬಾಕಿ ಮೊತ್ತ |
|---|---|---|---|
| ಕ.ರಾ.ರ.ಸಾ.ನಿಗಮ | 2023-2024 | 1211.80 | 452.62 |
| | 2024-2025 | 1905.20 | 495.80 |
| | 2025-2026 | 1366.62 | 631.72 |
| | **ಒಟ್ಟು** | **4483.62** | **1580.14** |
| ಬೆಂ.ಮ.ಸಾ.ಸಂಸ್ಥೆ | 2023-2024 | 549.67 | 205.43 |
| | 2024-2025 | 864.59 | 194.78 |
| | 2025-2026 | 606.03 | 310.61 |
| | **ಒಟ್ಟು** | **2020.29** | **710.82** |
| ವಾ.ಕ.ರ.ಸಾ.ಸಂಸ್ಥೆ | 2023-2024 | 792.22 | 283.91 |
| | 2024-2025 | 1232.18 | 275.55 |
| | 2025-2026 | 862.73 | 428.66 |
| | **ಒಟ್ಟು** | **2887.13** | **988.12** |
| ಕ.ಕ.ರ.ಸಾ.ನಿಗಮ | 2023-2024 | 646.06 | 238.66 |
| | 2024-2025 | 1013.03 | 204.32 |
| | 2025-2026 | 698.61 | 284.44 |
| | **ಒಟ್ಟು** | **2357.70** | **727.42** |
| ಒಟ್ಟು | 2023-2024 | 3199.75 | 1180.62 |
| | 2024-2025 | 5015.00 | 1170.45 |
| | 2025-2026 | 3534.00 | 1655.43 |
| | **ಒಟ್ಟಾರೆ** | **11748.75** | **4006.51** |

**ಮುಂದುವರೆದು, ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ:-**

- ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ನವೆಂಬರ್-2024ರ ಅಂತ್ಯಕ್ಕೆ ಬಾಕಿ ಉಳಿಸಿಕೊಂಡಿರುವ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನ ಬಾಕಿ ಮೊತ್ತ ಪಾವತಿಸಲು ಸರ್ಕಾರದ ಖಾತರಿ/ ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ರೂ.2000/- ಕೋಟಿ ಸಾಲ ಪಡೆಯಲು ಸರ್ಕಾರದ ಆದೇಶ ಸಂಖ್ಯೆ ಟಿಡಿ 45 ಟಿಸಿಬಿ 2023, ದಿನಾಂಕ:31.12.2024ರಲ್ಲಿ ಅನುಮೋದನೆ ನೀಡಲಾಗಿದೆ ಹಾಗೂ ಸದರಿ ಸಾಲದ ಮೊತ್ತವನ್ನು ಸಂಪೂರ್ಣವಾಗಿ ಸರ್ಕಾರವೇ ಮರು ಪಾವತಿಸುತ್ತದೆ.

**(ರೂ. ಕೋಟಿಗಳಲ್ಲಿ)**

| ಸಂಸ್ಥೆ/ನಿಗಮ | ಮೊತ್ತ |
|---|---|
| ಕ.ರಾ.ರ.ಸಾ.ನಿಗಮ | 623.80 |
| ಬೆಂ.ಮ.ಸಾ.ಸಂಸ್ಥೆ | 589.20 |
| ವಾ.ಕ.ರ.ಸಾ.ಸಂಸ್ಥೆ | 646.00 |
| ಕ.ಕ.ರ.ಸಾ.ನಿಗಮ | 141.00 |
| **ಒಟ್ಟು** | **2000.00** |

**2025-26ನೇ ಸಾಲಿನಲ್ಲಿ ಸದರಿ ರೂ.2000 ಕೋಟಿ ಸಾಲದ ಮೊತ್ತದ ಅಸಲು ಮತ್ತು ಬಡ್ಡಿ ಪಾವತಿಗಾಗಿ ನಾಲ್ಕು ಸಾರಿಗೆ ನಿಗಮಗಳಿಗೆ ಒಟ್ಟು ರೂ.452.00 ಕೋಟಿಗಳ ಅನುದಾನವನ್ನು ಸಹ ಒದಗಿಸಲಾಗಿದ್ದು, ಅದರಂತೆ ತ್ರೈಮಾಸಿಕವಾರು ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ.**

- 2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ 2000 ಡೀಸಲ್ ಬಸ್ಸುಗಳಿಗೆ ತಗಲುವ ವೆಚ್ಚವನ್ನು ಸರ್ಕಾರದಿಂದ ಭರಿಸಿ ಈ ಕೆಳಕಂಡಂತೆ ನಿಗಮವಾರು ಖರೀದಿಸಲು ಕ್ರಮವಹಿಸಲಾಗುತ್ತಿದೆ.

| ಸಂಸ್ಥೆ/ನಿಗಮ | ಮೊತ್ತ |
|---|---|
| ಕ.ರಾ.ರ.ಸಾ.ನಿಗಮ | 900 |
| ವಾ.ಕ.ರ.ಸಾ.ಸಂಸ್ಥೆ | 700 |
| ಕ.ಕ.ರ.ಸಾ.ನಿಗಮ | 400 |
| **ಒಟ್ಟು** | **2000** |

- ನಾಲ್ಕು ಸಾರಿಗೆ ಸಂಸ್ಥೆಗಳಿಗೆ ದಿನಾಂಕ:01.01.2020ರಿಂದ ದಿನಾಂಕ:28.02.2023 ರವರೆಗಿನ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ/ ನೌಕರರಿಗೆ ದಿನಾಂಕ:01.01.2020ರ ಪರಿಷ್ಕೃತ ವೇತನ ಶ್ರೇಣಿಯನ್ವಯ ಪಾವತಿಸಬೇಕಾದ ಉಪಧನ ಹಾಗೂ ಗಳಿಕೆ ರಜೆ ನಗದೀಕರಣದ ವ್ಯತ್ಯಾಸ ಮೊತ್ತದ ಪಾವತಿಗಾಗಿ ಒಟ್ಟು ರೂ.224.05 ಕೋಟಿಗಳನ್ನು ನಿಗಮವಾರು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಅದರಂತೆ ನಿವೃತ್ತ ನೌಕರರಿಗೆ ಈಗಾಗಲೇ ಪಾವತಿ ಮಾಡಲಾಗಿರುತ್ತದೆ:-

**(ರೂ.ಕೋಟಿಗಳಲ್ಲಿ)**

| ಸಂಸ್ಥೆ | ಅನುದಾನ |
|---|---|
| ಕ.ರಾ.ರ.ಸಾ.ನಿಗಮ | 86.55 |
| ಬೆಂ.ಮ.ಸಾ.ಸಂಸ್ಥೆ | 50.25 |
| ವಾ.ಕ.ರ.ಸಾ.ಸಂಸ್ಥೆ | 51.50 |
| ಕ.ಕ.ರ.ಸಾ.ನಿಗಮ | 35.75 |
| **ಒಟ್ಟು** | **224.05** |

- ನಾಲ್ಕು ಸಾರಿಗೆ ನಿಗಮಗಳ ನಗದು ಕೊರತೆಯನ್ನು ನಿಭಾಯಿಸಲು 2023-24 ಮತ್ತು 2024-25ನೇ ಸಾಲಿನಲ್ಲಿ ನಿಗಮಗಳು ಕ್ರಮವಾಗಿ ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.581.47 ಕೋಟಿ ಮತ್ತು ರೂ.637.76 ಕೋಟಿ ಸೇರಿದಂತೆ ಒಟ್ಟು ರೂ.1219.23 ಕೋಟಿಗಳ ಪಾವತಿಯಿಂದ ವಿನಾಯಿತಿ ನೀಡಲಾಗಿದೆ
- ಪ್ರಸ್ತುತ ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣವನ್ನಾಗಿ ಮಾಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಟಿಡಿ 280 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು